ವಿಜಯವಾಣಿ
ಕನ್ನಡಿಗರ ಧ್ವನಿ

**Sunday 31th July 2022, Page No.08**

## RVCE: The parva kannada festival was held with grandeur

# ವೈಭವದಿಂದ ನಡೆದ ಪರ್ವ ಕನ್ನಡ ಹಬ್ಬ

ವಿಜಯವಾಣಿ ಚಿತ್ರ



ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ಹಬ್ಬ 'ಪರ್ವ' ಕಾರ್ಯಕ್ರಮದಲ್ಲಿ ಭೂ ವಿಜ್ಞಾನಿ ಕಪಿಲಾ ಶ್ರೀಧರ್, ಕನ್ನಡ ಸಂಘದ ಮಾಜಿ ಪದಾಧಿಕಾರಿ ಪ್ರೊ. ಎಸ್. ಸತ್ಯನಾರಾಯಣ, ಪ್ರಾಂಶುಪಾಲ ಡಾ. ಕೆ ಎನ್. ಸುಬ್ರಹ್ಮಣ್ಯ ಮತ್ತಿತರರು ಉಪಸ್ಥಿತರಿದ್ದರು

**ಬೆಂಗಳೂರು:** ಆರ್‌ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕನ್ನಡ ಹಬ್ಬ 'ಪರ್ವ' ವಿಜೃಂಭಣೆಯಿಂದ ನಡೆಯಿತು. ಸಾಂಪ್ರದಾಯಿಕ ಉಡುಗೆ ತೊಟ್ಟ ವಿದ್ಯಾರ್ಥಿಗಳು ಸಂಗೀತ, ನೃತ್ಯ, ನಾಟಕಗಳ ಜತೆಗೆ ಜಾನಪದ ಕಲಾ ಮೇಳಗಳ ಪ್ರದರ್ಶನ ನೀಡಿ ರಂಜಿಸಿದರು. ಗಾಳಿಪಟ-2 ಚಿತ್ರತಂಡ ಪಾಲ್ಗೊಂಡಿದ್ದು, ಹಬ್ಬಕ್ಕೆ ಮತ್ತಷ್ಟು ಮೆರುಗು ತಂದಿತು.

**» ಆರ್ ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜನೆ**

**» ಸಂಗೀತ, ನೃತ್ಯ, ನಾಟಕ, ಜಾನಪದ ರಸದೌತಣ**

ಚಿತ್ರ ನಿರ್ದೇಶಕ ಯೋಗರಾಜ್ ಭಟ್, ಪವನ್‌ಕುಮಾರ್, ಶರ್ಮಿಳಾ ಮಾಂಡ್ರೆ ಚಿತ್ರದ ಹಾಡೊಂದನ್ನು ಬಿಡುಗಡೆ ಮಾಡಿದರು. ನಟ ರಿಶಿ, 'ನೋಡಿ ಸ್ವಾಮಿ ಇವನು ಇರೋದು ಹೀಗೆ' ಚಿತ್ರದ ಪ್ರಮೋಷನ್ ಮಾಡಿದರು. ನಟಿ ಹರ್ಷಿಕಾ ಪೂಣಚ್ಚ, ಡಿಜೆ ನೂತನ್ ಇತರರು ಪಾಲ್ಗೊಂಡು ಕನ್ನಡ ಹಬ್ಬವನ್ನು ಸಂಭ್ರಮಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ಭೂ ವಿಜ್ಞಾನಿ ಕಪಿಲಾ ಶ್ರೀಧರ್ ಮಾತನಾಡಿ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಇತಿಹಾಸ ವಿವರಿಸಿದರು. ಆ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿಮಾನ ಮೂಡಿಸಿದರು. ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಹ್ಮಣ್ಯ ಮಾತನಾಡಿ, ಕೋವಿಡ್ ನಿಂದ ಕಳೆದ ಎರಡು ವರ್ಷಗಳಿಂದ ಕನ್ನಡ ಹಬ್ಬ ಆಚರಣೆ ನಡೆದಿರಲಿಲ್ಲ. ಈಗ ಅವಕಾಶ ಒದಗಿಬಂದಿದೆ. ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳು ಇರಬೇಕು. ಅದರಿಂದ ಕನ್ನಡ ಭಾಷೆ ಸಂಸ್ಕೃತಿ ಉಳಿಸಿ ಬೆಳೆಸಲು ಸಾಧ್ಯ ಎಂದು ಹೇಳಿದರು.

ಕನ್ನಡ ಸಂಘಟನೆ ಅಗತ್ಯತೆ ಹಾಗೂ ಮಹತ್ವ ಕುರಿತು ಕನ್ನಡ ಸಂಘದ ಅಧ್ಯಕ್ಷ ಡಾ. ವಿಕ್ರಂ ಎನ್. ಬಹದ್ದೂರ ದೇಸಾಯಿ ವಿವರಿಸಿದರು. ಕನ್ನಡ ಸಂಘದ ಮಾಜಿ ಪದಾಧಿಕಾರಿ ಪ್ರೊ. ಎಸ್. ಸತ್ಯನಾರಾಯಣ ಅವರಿಗೆ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿದರು. ರಾಜಲಕ್ಷ್ಮೀ ಮೂಡಬಿದರೆ ಮತ್ತಿತರರಿದ್ದರು.